ಭಂಜಿಸತೊಡಗಿದರು. ದ್ರೌಪದಿ, ದುರ್ಯೋಧನ, ಹಿಡಿಂಬೆ ಬಗ್ಗೆ ಕವಿತೆ ಬರೆದರೂ ಕೂಡ ಅವುಗಳ ಮೇಲಿನ ದೌರ್ಜನ್ಯ, ಶೋಷಣೆಯೇ ಕೇಂದ್ರದಲ್ಲಿದ್ದವು. ಅಮಾಯಕ ದಲಿತರ ಕಗ್ಗೊಲೆಗಳು ದೀರ್ಘ ಕಥನಕಾವ್ಯಗಳಾದವು. ತಬ್ಬಲಿಜಾತಿಗಳ ಸಂಕಟಗಳು ಆಧುನಿಕ ಡಪ್ಪಿನಾಟಗಳಾದವು. ದೇವದಾಸಿಯರ ಸಂಕಟಗಳನ್ನು ದೊಡ್ಡ ಪ್ರಮಾಣದಲ್ಲಿ ಕಾವ್ಯದೊಳಗೆ ದಾಖಲಿಸಿದರು. ಜನವಿರೋಧಿ ಆಚರಣೆಗಳಿಂದ ಸಮುದಾಯವನ್ನು ಹೊರತರುವ ಹಂಬಲ ಹೊತ್ತುನಿಂತ ಕವಿತೆಗಳು ಗುಡುಗತೊಡಗಿದವು. ಈ ಭಾಗದ ಚಳವಳಿಗಳ ಕೊರಳ ದನಿಯಾದವು. ಅನೇಕ ಮೌಢ್ಯ ಕಂದಾಚಾರಗಳನ್ನು ವಿರೋಧಿಸಲೆಂದೇ ಕಾವ್ಯರಚಿಸಿದರು. 'ಬದುಕಿಗಾಗಿ ಕಲೆ' ಎಂಬುದನ್ನು ವಾಲೀಕಾರರು ಎಲ್ಲ ರೀತಿಯಿಂದಲೂ ಅನ್ವಯಿಸಿಕೊಂಡರು.

'ಬುದ್ಧ ಅತ್ತರೂ ಇಲ್ಲ, ಕ್ರಿಸ್ತ ಸತ್ತರೂ ಇಲ್ಲ
ಬಸವ ನೆತ್ತರು ಹರಿಸಿದರಿಲ್ಲ ಫಲವು
ಗಾಂಧಿ ಅಂಬೇಡ್ಕರರು ಏನು ಮಾಡಿದರಿಲ್ಲ
ಬಿದ್ದುಕೊಂಡಿದೆ ಹಾಗೆ ನಮ್ಮ ನೆಲವು'

ಅಂತ ಅಲವತ್ತುಕೊಂಡರು. ಮತ್ತೆ ಮತ್ತೆ ಕ್ರಾಂತಿಗೆ ಮರುಳಲೇಬೇಕಾದ ಅನಿವಾರ್ಯತೆಯನ್ನು ಅವರ ಕಾವ್ಯ ಸಾರತೊಡಗಿತು. ಅವರ ಕಾವ್ಯಕ್ಕೆ ಸಿಗಬೇಕಾದಷ್ಟು ಮಹತ್ವ ಸಿಗದೇ ಹೋಯಿತು. ಆರ್ತವಾದ, ಆದರೆ ಗೇಯತೆಯಿಂದ ಕೂಡಿದ ಕವಿತೆಗಳಿವು. ಯಾವಾಗಲೂ ತನ್ನ ಕವಿತೆಯ ಸಾಮಾಜಿಕ ಪರಿಣಾಮವೇ ಮುಖ್ಯವೆಂದು ಅವರು ಭಾವಿಸಿದ್ದರು.

ವಾಲೀಕಾರರು ಮಹಾಕಾವ್ಯವೊಂದನ್ನು ಬರೆಯಬೇಕೆಂಬ ಹಟಕ್ಕೆ ಬಿದ್ದರು. 'ವ್ಯೋಮಾವ್ಯೋಮ' ಎಂಬ ಮಹಾಕಾವ್ಯ ಬರೆದೂ ಬಿಟ್ಟರು. ಇದು ಮಹಾಕಾವ್ಯ ಹೌದೋ ಅಲ್ಲವೋ ಎಂಬುದು ಇನ್ನೂ ಬಗೆಹರಿಯದ ಸಂಗತಿ. ಇರಲಿ, ಇದರ ಬೃಹತ್‌ಗಾತ್ರದಲ್ಲಿ ಏನು ಹುದುಗಿದೆ ಎಂಬುದನ್ನು ಗಮನಿಸೋಣ. ಇಲ್ಲಿನ ಕಾವ್ಯ ಭಾಷೆ ಮೊದಲಿನಂತಿಲ್ಲ. ಅಂದರೆ ನೇರವಾದ, ಗೇಯತೆಯಿಂದ ಕೂಡಿದ ಭಾಷೆ ಕೊಂಚ ಬದಲಾಗಿದೆ. ಅವರ ಎಂದಿನ ಪ್ರಿಯವಾದ ಸಾಮಾಜಿಕ ಭಾಷೆ ಹಿನ್ನೆಲೆಗೆ ಸರಿದು ಅಮೂರ್ತವೂ ತಾತ್ವಿಕವೂ ಆಗಲು ಯತ್ನಿಸಿದೆ. ವಚನ ಭಾಷೆ, ಬೌದ್ಧ ಪರಿಭಾಷೆಗಳು, ಸೂಫೀಲೋಕದ ಭಾಷೆ, ತತ್ವಪದಗಳ ಭಾಷೆ – ಹೀಗೆ ಹಲವು ಭಾಷಾ ಕ್ರಮಗಳ ಬಳಕೆಯಿದೆ. ಆದರೆ ಇಡೀ ಮಹಾಕಾವ್ಯದ ಸಮಸ್ಯೆ ಏನೆಂದರೆ, ತನ್ನ ಆಕೃತಿಯನ್ನು ಸರಿಯಾಗಿ ಗುರುತಿಸಿಕೊಳ್ಳದೇ ಇರುವುದು. ಶಿಲ್ಪದ ಶಿಥಿಲತೆ ಎದ್ದು ಕಾಣುತ್ತದೆ. ಶಿಲ್ಪದ ಶಿಥಿಲತೆ ಮಾತ್ರವಲ್ಲ, ವಸ್ತುವಿನ ಶಿಥಿಲತೆಯೂ ಇಲ್ಲಿದೆ. ನೂರಾರು ಘಟನೆಗಳು ಯಾಕೆ ಸಂಭವಿಸುತ್ತಿವೆ ಎಂಬುದೇ ಗೊತ್ತಾಗುವುದಿಲ್ಲ. ಎಲ್ಲೆಲ್ಲಿ ಆತ್ಮಕಥನಾತ್ಮಕ ಧಾಟಿಯಿದೆಯೋ ಅಲ್ಲಿ ಆಪ್ತವೆನಿಸುತ್ತದೆ. ಕೆಲವೊಮ್ಮೆ ದಾರ್ಶನಿಕ ತತ್ವಗಳ ಮಂಡನೆ ಭಾರವೆನಿಸಿದೆ. ವಾಲೀಕಾರರು ಜಗತ್ತಿನ ಹಲವು ದಾರ್ಶನಿಕರ ಕುರಿತು ಇಲ್ಲಿ ಆಸಕ್ತಿ ತಾಳಿದ್ದಾರೆ. ಆದರೆ ಇವರೆಲ್ಲ ಇಲ್ಲಿ ಯಾಕೆ ಮಂಡಿತವಾಗುತ್ತಿದ್ದಾರೆಂಬುದಕ್ಕೆ ರಚನೆಯ ಒಳಗೇನೆ ಸಾಕ್ಷ್ಯಗಳು ಸಿಗುತ್ತಿಲ್ಲ. ತತ್ವಜ್ಞಾನಿಗಳ ಉಲ್ಲೇಖ ಮಾತ್ರದಿಂದ ಕಾವ್ಯ ನಿಬಿಡವಾದಂತಿದೆ. ವಾಲೀಕಾರರು ಈ ರಚನೆಯಲ್ಲಿ ಎರಡು ಸಂಗತಿಗಳನ್ನು ನಿರ್ವಹಿಸುತ್ತಿರುವಂತಿದೆ. ಒಂದು: ಮಾನವ ಮನಸ್ಸಿನ ಒಳ ಪ್ರವೃತ್ತಿಗಳು. ಅಂದರೆ ಕರುಣೆ, ಪ್ರೀತಿ, ದಯೆ, ಶಾಂತಿ, ಅಹಿಂಸೆ, ಇತ್ಯಾದಿ. ಮನುಷ್ಯರ ನಡುವಿನ ಒಳ್ಳೆಯತನ ಮತ್ತು ಕೆಟ್ಟತನಗಳ ನಡುವಿನ ಸಂಘರ್ಷ. ಎರಡು: ಮನುಷ್ಯರ ವ್ಯಕ್ತಿತ್ವ ಅವರ ಪರಿಸರಕ್ಕೆ ಮತ್ತು ಸಮಾಜಕ್ಕೆ ಉಪಯುಕ್ತವಾಗುವ ಹಾಗೆ ಬೆಳೆಯುವ ಕ್ರಮ ಯಾವುದು ಎಂಬ ಹುಡುಕಾಟ. ಮಹಾಕಾವ್ಯದಲ್ಲಿ ಬೌದ್ಧ ದಾರ್ಶನಿಕತೆಯ ಅನೇಕ ಎಳೆಗಳು ಒಂದರೊಳಗೊಂದು ಸೇರಿಕೊಂಡಿವೆ. ಬುದ್ಧನ ಜೀವನ ಗುಪ್ತಗಾಮಿನಿಯಾಗಿ ಹರಿದಿದೆ. ಇದಕ್ಕೊಂದು ವಸ್ತು ಎನ್ನುವಂಥದ್ದನ್ನು ವಾಲೀಕಾರರು ಆಯ್ಕೆ ಮಾಡಿಕೊಂಡಿಲ್ಲ. ಕಾಲದ ಅನಂತಯಾತ್ರೆಯ ಒಳಗೆ ಬರುವ ಹಲವಾರು ಘಟನಾವಳಿ ಮತ್ತು ಚಿಂತನೆಗಳನ್ನು ಆಕರವಾಗಿ ಬಳಸಿಕೊಂಡಿದ್ದಾರೆ. ಪಂಪ, ಬಸವಣ್ಣ, ಟ್ಯಾಗೋರ್, ಚಾಮ್‌ಸ್ಕಿ, ಡೆರಿಡಾ, ಸಸ್ಸೂರ್, ಅಬ್ರಾಹಂ ಲಿಂಕನ್, ಹೆಲೆನ್, ದಯಾನಂದ ಸರಸ್ವತಿ, ಅಡಿಗರು, ಶೂನ್ಯಸಂಪಾದನೆ, ಜನ್ನಿ, ಪಿಚ್ಚಳ್ಳಿ ಶ್ರೀನಿವಾಸ, ರಾಯಚೂರಿನ ಕರಿಯಪ್ಪ ಮಾಸ್ತರ್ ಎಲ್ಲರೂ ಇದ್ದಾರೆ. ಮಾನವ ಜನಾಂಗದ